ದಮ, ತಪಸ್ಸು, ಶೌಚ, ಕ್ಷಾಂತಿ, ಪ್ರಾಮಾಣಿಕತೆ, ಜ್ಞಾನ, ವಿಜ್ಞಾನ, ಇವೆಲ್ಲವೂ ಬ್ರಾಹ್ಮಣ ಕರ್ಮವೆಂದು ಶ್ರೀಕೃಷ್ಣನು ಹೇಳುತ್ತಾನೆ. ಆಧ್ಯಾತ್ಮಿಕ ಜೀವನದಲ್ಲಿ ಇವೆಲ್ಲವೂ ಅತ್ಯಂತ ಆವಶ್ಯಕವಾದ ಗುಣಗಳು.[೨]

ನಾವು ಆಧ್ಯಾತ್ಮಿಕ ಸಾಧನೆಗಳಲ್ಲಿ ಮುಂದುವರಿಯುತ್ತಿರುವಾಗ ಆಂತರಿಕವಾಗಿ ಅನೇಕ ದುಷ್ಟ ಶಕ್ತಿಗಳನ್ನು ಎದುರಿಸಬೇಕಾಗುತ್ತದೆ. ಇದಕ್ಕೆ ಕ್ಷಾತ್ರಗುಣ ಬೇಕಾಗುತ್ತದೆ. ಆಧ್ಯಾತ್ಮಿಕ ಜೀವನವನ್ನು ಗಂಭೀರವಾಗಿ ಸ್ವೀಕರಿಸಿ ಸಾಧನೆಯನ್ನು ಮಾಡುವಾಗ ನಮ್ಮ ಮನಸ್ಸು ಕದಡಿದಂತಾಗುತ್ತದೆ, ಅಪ್ರಜ್ಞಾ ಮನಸ್ಸಿನಲ್ಲಿರುವ ಸಂಸ್ಕಾರಗಳು ಮೇಲೇಳುತ್ತವೆ. ಇವು ಕಾಮಕ್ರೋಧಾದಿ ಭಾವಗಳನ್ನು ಕೆರಳಿಸುತ್ತವೆ, ಅನೇಕ ಪ್ರಲೋಭನೆಗಳು ನಮ್ಮನ್ನು ಸಾಧನೆಯಿಂದ ವಿಮುಖಗೊಳಿಸಲು ಪ್ರಯತ್ನಿಸುತ್ತವೆ. ಈಗ ಮನಸ್ಸಿನಲ್ಲಿ ದೊಡ್ಡ ಹೋರಾಟ ಪ್ರಾರಂಭವಾಗುತ್ತದೆ. ಈ ಹೋರಾಟವನ್ನು ಎದುರಿಸಲು ನಮಗೆ ಶೌರ್ಯಬೇಕು, ಬತ್ತದ ಉತ್ಸಾಹಬೇಕು, ವೀರಾವೇಶದಿಂದ ಹೋರಾಡಬೇಕು. ಸ್ವಲ್ಪವೂ ಹಿಂಜರಿಯದೆ ಮುನ್ನುಗ್ಗಿ ಹೋರಾಡಲು ಧೃತಿ ಅಥವಾ ದೃಢತೆ ಮತ್ತು ದಕ್ಷತೆ ಬೇಕು. ಈ ಹೋರಾಟ ಸಾಕಪ್ಪ ಎನಿಸಿ ಸಾಧನೆಯಲ್ಲಿಯೇ ನಿರುತ್ಸಾಹ ಬಂದುಬಿಡಬಹುದು. ಆದರೆ ಪಲಾಯನ ವೃತ್ತಿಯಿಲ್ಲದೆ ಈ ಆಂತರಿಕ ಯುದ್ಧ ಮುಂದುವರಿಯಬೇಕು. ಇಲ್ಲಿ ಎರಡು ರೀತಿಯ ಯುದ್ಧ ನಡೆಯಬೇಕಾಗಿದೆ. ಅನೇಕ ಮಾನಸಿಕ ವೃತ್ತಿಗಳು ಪ್ರಜ್ಞಾ ಮನಸ್ಸಿನಲ್ಲಿ ಏಳುತ್ತವೆ. ಇವುಗಳನ್ನು ಮುಖಾಮುಖಿ ಎದುರಿಸಿ ನಿಗ್ರಹಿಸಬೇಕು. ಆದರೆ ಅಪ್ರಜ್ಞಾ ಮನಸ್ಸಿನಲ್ಲಿರುವ ಸಂಸ್ಕಾರಗಳು ನಮಗೆ ಗೋಚರಿಸುವುದಿಲ್ಲ , ಅವು ನಮಗೆ ತಿಳಿಯದಂತೆ ಬೇರೆ ಬೇರೆ ರೂಪದಲ್ಲಿ ನಮ್ಮ ಮೇಲೆ ಆಕ್ರಮಣ ನಡೆಸುತ್ತವೆ. ಇದೊಂದು ರೀತಿಯ ಗೆರಿಲ್ಲಾ ಯುದ್ಧ ಇದ್ದ ಹಾಗೆ. ಇದರಲ್ಲಿ ಜಯಿಸುವುದು ತುಂಬ ಕಷ್ಟ.

ಒಳ್ಳೆಯ ಗುಣ ಮತ್ತು ಸಂಸ್ಕಾರಗಳನ್ನು ಪಡೆಯುವುದು ವೈಶ್ಯ ವೃತ್ತಿ. ಸ್ವಪ್ರಯತ್ನದ ಬೆಲೆ ಕೊಟ್ಟು ಇವನ್ನು ಕೊಂಡುಕೊಳ್ಳಬೇಕು. ಕೃಷಿ, ಗೋರಕ್ಷಣೆ ಮತ್ತು ವಾಣಿಜ್ಯ ಇವು ವೈಶ್ಯ ಕರ್ಮಗಳೆಂದು ಶ್ರೀಕೃಷ್ಣನು ಹೇಳುತ್ತಾನೆ. ಇಲ್ಲಿ ಕೃಷಿಯನ್ನು ಆಂತರಿಕ ಕೃಷಿಯಾಗಿಯೂ ಅರ್ಥೈಸಬಹುದು. ವಿವೇಕದ ನೇಗಿಲಿನಿಂದ ಉಳಬೇಕು. ಭಕ್ತಿಯ ನೀರು ಹಾಯಿಸಬೇಕು ಮತ್ತು ದೇವರ ನಾಮದ ಬೀಜವನ್ನು ಬಿತ್ತಬೇಕು. ಇದು ಆಧ್ಯಾತ್ಮಿಕ ವೈಶ್ಯವೃತ್ತಿ.

ಭಗವಂತನನ್ನು ನಮ್ಮ ಹೃದಯಮಂದಿರದಲ್ಲಿ ಪ್ರತಿಷ್ಠಾಪಿಸಿ, ನಾವು ಅವನ ಸೇವೆಯನ್ನು ನೆರವೇರಿಸಬೇಕು. ಸೇವ್ಯ-ಸೇವಕ ಮನೋಭಾವದಿಂದ, ಭಗವಂತನ ದಾಸಾನುದಾಸರಾಗಿ, ನಮ್ಮ ಅಹಂಕಾರವನ್ನು ಅವನ ಮುಂದೆ ಬಲಿಕೊಡಬೇಕು. ಇದು ಶೂದ್ರ ವೃತ್ತಿ. ಅನೇಕ ಭಕ್ತರು ಸಾಧನೆಯ ಅಂಗವಾಗಿ ದೇವಾಲಯಗಳಲ್ಲಿ ಕೈಂಕರ್ಯವನ್ನು ಮಾಡುತ್ತಾರೆ. ಸೂಫಿ ಸಂತರಾದ ಜಲಾಲುದ್ದಿನ್ ರೂಮಿ ಹೇಳಿದ ಒಂದು ಕಥೆ ಈ ದಾಸ್ಯ ಮನೋಭಾವವನ್ನು ಸುಂದರವಾಗಿ ಪ್ರತಿಬಿಂಬಿಸುತ್ತದೆ. ಒಂದು ದೊಡ್ಡ ಕಾಡು. ಅಲ್ಲಿ ಎಲ್ಲ ಬಗೆಯ ಅನೇಕ ಪ್ರಾಣಿಗಳಿದ್ದವು. ಪ್ರಾಣಿಗಳು ತಮ್ಮ ಸ್ವರಕ್ಷಣೆಯಲ್ಲಿ ತುಂಬ ಪರಿಣತಿ ಪಡೆದಿದ್ದುದ್ದರಿಂದ ಮಾಂಸಾಹಾರಿ ಪ್ರಾಣಿಗಳಿಗೆ ಆಹಾರದ ಕೊರತೆಯುಂಟಾಯಿತು. ಒಂದು ದಿನ ತೋಳ ಮತ್ತು ನರಿ ಈ ಸಮಸ್ಯೆಯನ್ನು ಕುರಿತು ಚರ್ಚೆ ನಡೆಸುತ್ತಿದ್ದವು. ಸಿಂಹದೊಡನೆ ನಾವೊಂದು ಒಪ್ಪಂದ ಮಾಡಿಕೊಳ್ಳಬೇಕು; ನಾವೆಲ್ಲರೂ ಸುತ್ತಲಿನಿಂದ ಪ್ರಾಣಿಗಳನ್ನು ಅಟ್ಟಿಸಿಕೊಂಡು ಬರುವುದು; ಸಿಂಹವು ಅವುಗಳ ಮೇಲೆ ಎರಗಿ ಎಷ್ಟು ಸಾಧ್ಯವೋ ಅಷ್ಟು ಪ್ರಾಣಿಗಳನ್ನು ಕೊಂದುಬಿಡಬೇಕು; ಆನಂತರ ನಾವೆಲ್ಲರೂ ಸೇರಿ ಅವುಗಳನ್ನು ಹಂಚಿಕೊಳ್ಳುವುದು – ಈ ರೀತಿ ಅವು ನಿರ್ಧರಿಸಿದವು. ಈಗ ಅವು ಸಿಂಹದೊಡನೆ ಸಂದರ್ಶನಕ್ಕಾಗಿ ಹೊರಟವು. ಬಹಳ ಹೊತ್ತು ಕಾದ ನಂತರ ರಾಜನೊಡನೆ ಸಂದರ್ಶನ ದೊರಕಿತು. ''ಏನು ಸಮಾಚಾರ?'' ಎಂದು ಸಿಂಹ ಗರ್ಜಿಸಿತು. ನರಿ ಮತ್ತು ತೋಳ ತಮ್ಮ ಅಹವಾಲನ್ನು ಸಿಂಹದ ಮುಂದಿರಿಸಿದವು. ಸಿಂಹವು ಉದಾರ ಮನಸ್ಸಿನಿಂದ ಅವುಗಳ ಯೋಜನೆಗೆ ಒಪ್ಪಿಗೆ ನೀಡಿತು.

ಮರುದಿನ ಪೂರ್ವಯೋಜನೆಯಂತೆ ಆ ಮೂವರೂ ಕಾರ್ಯನಿರತರಾದರು. ಯೋಜನೆ ತುಂಬ ಯಶಸ್ವಿಯಾಯಿತು. ಒಂದು ಬೃಹತ್ ಗೂಳಿ, ದೊಡ್ಡ ಹಂದಿ ಮತ್ತು ಆಡು – ಇವುಗಳು ಯೋಜನೆಗೆ ಬಲಿಯಾದವು. ಈಗ ಸಿಂಹವು ತೋಳವನ್ನು ಕುರಿತು ಹೇಳಿತು, ''ಈಗ ನೀನು ಹೇಳು, ಯಾರಿಗೆ ಯಾವ ಪ್ರಾಣಿಯೆಂದು?'' ತೋಳ ಮುಂದೆ ಬಂದು ಸಿಂಹಕ್ಕೆ ತಲೆಬಾಗಿ ಹೇಳಿತು: ''ಹುಜೂರ್, ನೀನು ನಮಗೆಲ್ಲರಿಗಿಂತ ದೊಡ್ಡವನು. ಆದ್ದರಿಂದ ಗೂಳಿ ನಿನಗೆ, ನನಗೆ ಹಂದಿ ಸಾಕು. ಆಡು ನರಿಗೆ.'' ''ಇದು ನಿನ್ನ ಕೊನೆಯ ನಿರ್ಧಾರವೆ?'' ಸಿಂಹ ಗಂಭೀರವಾಗಿ ಗುಡುಗಿತು. ''ಹೌದು, ಪ್ರಭು'' – ತೋಳ ಕೈಮುಗಿದು ಬಿನ್ನೈಸಿಕೊಂಡಿತು. ''ಏನು? ಈ ಬೃಹದಾರಣ್ಯಕ್ಕೆ ನಾನೇ ಒಡೆಯನಾಗಿರುವಾಗ, ಇದು ನನ್ನದು, ಅದು ನಿನ್ನದು ಎಂದು ಒದರಲು ನಿನಗೆಷ್ಟು ಧೈರ್ಯ!'' ಎಂದು ಘನ ಗರ್ಜನೆಯೊಂದಿಗೆ ಸಿಂಹವು ತೋಳದ ಮೇಲೆರಗಿ ಅದನ್ನು ಕಬಳಿಸಿತು. ಇದನ್ನೆಲ್ಲ ನೋಡಿ ನರಿ ಭಯದಿಂದ ತತ್ತರಿಸುತ್ತಿದೆ. ಈಗ ಸಿಂಹದ ಕ್ರೂರ ದೃಷ್ಟಿ ನರಿಯ ಕಡೆ ತಿರುಗಿತು. ''ಹೂಂ! ಎಲವೋ ನರಿ ಮಹಾರಾಯ, ನಿನ್ನ ಅಭಿಪ್ರಾಯವೇನು ಹೇಳು.'' ನರಿಯು ಸಿಂಹಕ್ಕೆ ಸಾಷ್ಟಾಂಗವೆರಗಿ, ಅತ್ಯಂತ ವಿನಯದಿಂದ ಹೇಳಿತು: ''ಸಾರ್ವಭೌಮರೇ, ಎಲ್ಲವೂ ನಿಮಗೇ ಸೇರಿದ್ದು, ನನ್ನದೆಂಬುದು ಯಾವುದೂ ಇಲ್ಲ. ಈ ಮೂರು ಪ್ರಾಣಿಗಳೂ ನಿಮಗೇ ಸೇರಿದ್ದು, ನೀವೇ ತಿಂದು ತೃಪ್ತರಾಗಿ.'' ಈ ಮಾತಿನಿಂದ ತೃಪ್ತನಾದ ಸಿಂಹರಾಜ, ''ಎಲ್ಲವೂ ನಿನಗೇ ಇರಲಿ'' ಎಂದುಸುರಿ ಹೊರಟು ಹೋಯಿತು. ಈ ರೀತಿಯ ಶರಣಾಗತಿಯ ಭಾವವೇ ಆಧ್ಯಾತ್ಮಿಕ ಸಾಧನೆಯ ಆತ್ಯಂತಿಕ ಸ್ಥಿತಿ. ಬ್ರಾಹ್ಮಣವೃತ್ತಿಯಿಂದ ಪ್ರಾರಂಭವಾದ ಸಾಧನೆಯು ಶೂದ್ರವೃತ್ತಿಯಿಂದ ಶರಣಾಗತಿಯಲ್ಲಿ ಪರ್ಯವಸಾನಗೊಳ್ಳುತ್ತದೆ. ಆದ್ದರಿಂದ ಶೂದ್ರವೃತ್ತಿಯೇ ಎಲ್ಲದಕ್ಕಿಂತಲೂ ಹಿರಿದಾದುದಲ್ಲವೆ? *

೨ ಇವೆಲ್ಲವೂ ಭಕ್ತಿಶಾಸ್ತ್ರದ ಪ್ರಕಾರ ವೈಧೀಭಕ್ತಿ – ಅಂದರೆ ಭಕ್ತಿಯೋಗದ ಪ್ರಾಥಮಿಕ ಹಂತ.

# ದಿವ್ಯೋನ್ಮಾದದ ಸಾಧಕ ರಾಮಪ್ರಸಾದ

ಸ್ವಾಮಿ ವೀರೇಶಾನಂದ



**ಕು**ಮಾರಹಟ್ಟ ಎನ್ನುವ ಹಳ್ಳಿ ಗಂಗಾನದಿಯ ತಟದಲ್ಲಿದೆ. ಬಂಗಾಳ ರಾಜ್ಯದ ೨೪ನೆಯ ಪರಗಣ ಜಿಲ್ಲೆಯಲ್ಲಿದೆ. ಕೊಲ್ಕತಾದಿಂದ ೫೫ ಕಿ.ಮೀ. ದೂರದಲ್ಲಿದೆ. ೧೭೨೩ನೆಯ ಇಸವಿಯಲ್ಲಿ ಅಲ್ಲಿನ ವೈದ್ಯ ಕುಟುಂಬವೊಂದರಲ್ಲಿ ಸಾಧಕ ರಾಮಪ್ರಸಾದನು ಜನ್ಮತಾಳಿದನು. ಅವನ ತಂದೆ ರಾಮರಾಮಸೇನ್, ತಾಯಿ ಸಿದ್ಧೇಶ್ವರಿ. ತಂದೆ ಆಯುರ್ವೇದ ಪಂಡಿತರು, ಸಂಸ್ಕೃತ ಪಂಡಿತರು ಮತ್ತು ತಾಂತ್ರಿಕ ಸಾಧಕರು ಕೂಡ.

ಚಿಕ್ಕವಯಸ್ಸಿನಲ್ಲಿಯೇ ರಾಮಪ್ರಸಾದನು ಗ್ರಾಮದ ಶಾಲೆಗೆ ಹೋದನು. ಅವನು ಬಹಳ ಪ್ರತಿಭಾವಂತನಾಗಿದ್ದನು. ತನ್ನ ಅಧ್ಯಯನವನ್ನು ಬಹಳ ಕಡಮೆ ಸಮಯದಲ್ಲಿಯೇ ಮುಗಿಸಿಬಿಟ್ಟನು. ಸಂಸ್ಕೃತ ವ್ಯಾಕರಣ ಮತ್ತು ಕಾವ್ಯಗಳಲ್ಲಿ ಪ್ರವೀಣತೆಯನ್ನು ಪಡೆದನು. ಆದರೆ ಕುಟುಂಬದ ವೃತ್ತಿಯಾದ ಆಯುರ್ವೇದದಲ್ಲಿ ಅವನಿಗೆ ಎಳ್ಳಷ್ಟೂ ಆಸಕ್ತಿ ಇರಲಿಲ್ಲ. ಇದರಿಂದ ಅವನ ತಂದೆಗೆ ನಿರಾಸೆಯಾಯಿತು. ಇದಕ್ಕೆ ಬದಲಾಗಿ ಅವನು ಹಲವು ಭಾಷೆಗಳನ್ನು ಕಲಿಯುವುದರಲ್ಲಿ ಉತ್ಸುಕತೆ ತೋರಿದನು. ಇದನ್ನು ತಿಳಿದುಕೊಂಡ ಅವನ ತಂದೆ ಪರ್ಷಿಯನ್ ಮತ್ತು ಹಿಂದಿ ಭಾಷೆಗಳನ್ನು ಕಲಿಯುವಂತೆ ಅವನನ್ನು ಉತ್ತೇಜಿಸಿದನು. ಇದರಿಂದ ಅವನಿಗೆ ಉದ್ಯೋಗ ಸಿಗಬಹುದೆಂದು ಅವನು ಆಶಿಸಿದನು. ಏಕೆಂದರೆ, ಆ ಸಮಯದಲ್ಲಿ ಬಂಗಾಳ ರಾಜ್ಯವು ಮುಸ್ಲಿಂ ದೊರೆಗಳ ಆಡಳಿತದಲ್ಲಿತ್ತು.

ರಾಮಪ್ರಸಾದನಿಗೆ ಈಗ ೧೮ನೆಯ ವಯಸ್ಸು. ಆದರೆ ಪ್ರಾಪಂಚಿಕ ವಿಷಯದಲ್ಲಿ ನಿರಾಸಕ್ತಿ. ಇದೊಂದು ಕಾಯಿಲೆ ಎಂದು ತಂದೆ ತಾಯಿಗಳಿಗೆ ಅನ್ನಿಸಿತು. ಮದುವೆಯೇ ಇದಕ್ಕೆ ತಕ್ಕ ಔಷಧಿ ಎಂದು ಅವರು ಪರಿಗಣಿಸಿದರು. ಹೀಗಾಗಿ ೨೨ನೆಯ ವಯಸ್ಸಿನಲ್ಲಿ ಅವನಿಗೆ ಮದುವೆಯಾಯಿತು. ಶರ್ವಾಣಿ ಮಡದಿಯಾಗಿ ಮನೆದುಂಬಿದಳು. ಅಂದಿನ ಪದ್ಧತಿಯಂತೆ ಹೊಸದಾಗಿ ಮದುವೆಯಾದ ದಂಪತಿಗಳು ಕುಟುಂಬದ ಗುರುವಿನ ಹತ್ತಿರ ಮಂತ್ರದೀಕ್ಷೆ ತೆಗೆದುಕೊಂಡರು. ಕಾಲಕ್ರಮೇಣ ದಂಪತಿಗಳಿಗೆ ನಾಲ್ಕು ಮಕ್ಕಳಾದರು – ಇಬ್ಬರು ಹೆಣ್ಣುಮಕ್ಕಳು, ಪರಮೇಶ್ವರಿ ಮತ್ತು ಜಗದೀಶ್ವರಿ. ಇಬ್ಬರು ಗಂಡುಮಕ್ಕಳು, ರಾಮದುಲಾಲ್ ಮತ್ತು ರಾಮಮೋಹನ್. ಇಷ್ಟಾದರೂ ಭಗವಂತನಲ್ಲಿಯೇ ರಾಮಪ್ರಸಾದನಿಗೆ ಅದ್ಭುತ ಆಕರ್ಷಣೆ. ಭಗವದ್ಧ್ಯಾನವು ಅವನ ಮನಸ್ಸನ್ನು ತುಂಬಿಕೊಂಡಿತ್ತು. ಭಗವತ್ಪ್ರೇಮವು ಅವನನ್ನು ಮೋಡಿಮಾಡಿತ್ತು. ಹೀಗಾಗಿ ಅವನಿಗೆ ನಿಯಮಿತ ಗೃಹಕೃತ್ಯಗಳಲ್ಲಿ ತೊಡಗಿಸಿಕೊಳ್ಳಲಾಗಲಿಲ್ಲ. ಅದಕ್ಕೆ ಬದಲಾಗಿ ರಾಮಪ್ರಸಾದನು ಹೆಚ್ಚುಹೆಚ್ಚಾಗಿ ಆಧ್ಯಾತ್ಮಿಕ ಸಾಧನೆಗಳಲ್ಲಿ ಮುಳುಗಿಹೋದನು.

ಏತನ್ಮಧ್ಯೆ ಒಂದು ದಿನ ಕುಟುಂಬ ಗುರುವು ಹಠಾತ್ತನೆ ಮರಣ ಹೊಂದಿದನು. ಸಾಧಕನು ಪ್ರಾಮಾಣಿಕನಾಗಿದ್ದರೆ, ಅವನಿಗೆ ಸರಿಯಾದ ಮಾರ್ಗದರ್ಶಕನು ಸಿಕ್ಕದೇ ಇರುವುದಿಲ್ಲ. ದೈವದ ಕೈವಾಡವೋ ಎಂಬಂತೆ, ಆಗಮ ವಾಗೀಶ ಎಂಬ ಬಹು ದೊಡ್ಡ ತಾಂತ್ರಿಕ ಸಾಧಕ ಮತ್ತು ವಿದ್ವಾಂಸನು ಕುಮಾರಹಟ್ಟ ಗ್ರಾಮಕ್ಕೆ ಆಗಮಿಸಿದನು. ಅವನ ದಿವ್ಯತೆಗೆ ಮಾರುಹೋಗಿ ಜನರು ಅವನ ಸುತ್ತ ನೆರೆಯಲಾರಂಭಿಸಿದರು. ಒಂದು ದಿನ ಏಕಾಂತದಲ್ಲಿ ರಾಮಪ್ರಸಾದನು ಈ ಸಾಧಕನ ದರ್ಶನ ಮಾಡಿದನು. ಅವನನ್ನು ಕಂಡೊಡನೆಯೇ, ವಾಗೀಶನು ಇವನೊಬ್ಬ ಅಪ್ರತಿಮ ಸಂತನೆಂದೂ, ಇವನಿಗೆ ಉಜ್ಜ್ವಲ ಆಧ್ಯಾತ್ಮಿಕ ಭವಿಷ್ಯವಿರುವುದೆಂದೂ ಗುರುತಿಸಿದನು. ತಾಂತ್ರಿಕ ಸಾಧನೆಯ ಮಾರ್ಗದಲ್ಲಿ ರಾಮಪ್ರಸಾದನಿಗೆ ಮಾರ್ಗದರ್ಶನ ಮಾಡಿದನು. ಸ್ವಲ್ಪಕಾಲದ ನಂತರ ಗುರುವು ತೆರಳಿದನು, ಶಿಷ್ಯನು ತನ್ನ ಗ್ರಾಮದಲ್ಲಿಯೇ ಉಳಿದು ತೀವ್ರ ಸಾಧನೆಯಲ್ಲಿ ಮಗ್ನನಾದನು.

ರಾಮಪ್ರಸಾದನ ತಂದೆ ರಾಮರಾಮ ಸೇನ ಒಬ್ಬ ಧಾರ್ಮಿಕ ವ್ಯಕ್ತಿಯಾಗಿದ್ದನು. ಹೀಗಾಗಿ ಅವನು ತನ್ನ ಮಗನ ಆಧ್ಯಾತ್ಮಿಕ ಪಯಣಕ್ಕೆ ಅಡ್ಡಿಬರಲಿಲ್ಲ. ಇಷ್ಟಾದರೂ ತನ್ನ ನಂತರ, ಕುಟುಂಬಕ್ಕೆ ಕರಾಳ ಭವಿಷ್ಯ ಕಾದಿದೆ ಎಂದು ಅವನು ಮನಗಂಡನು. ಅಷ್ಟೇ ಅಲ್ಲ,

ಹಠಾತ್ತನೆ ಅವನು ಮರಣಹೊಂದಿದನು ಕೂಡ. ತಂದೆ ಶಂಕಿಸಿದ್ದ ಕರಾಳ ದಿನಗಳು ಆರಂಭವಾಗಿಯೇಬಿಟ್ಟವು. ಆದಾಯವಿಲ್ಲದೆ ರಾಮಪ್ರಸಾದನು ಕಂಗಾಲಾದನು. ವೃತ್ತಿಯನ್ನೇನೂ ಮಾಡಲಾಗದೆ ಮಂಕಾದನು. ವಿದ್ವತ್ತು ಇದ್ದರೂ ಅದರಿಂದ ಹಣವನ್ನು ಸಂಪಾದಿಸಲು ಅಸಮರ್ಥನಾದನು. ರಾಮಪ್ರಸಾದನು ಎಂದೆಂದೂ ಜಗನ್ಮಾತೆಯನ್ನು ಆಶ್ರಯಿಸಿಯೇ ಬಾಳುವೆ ಮಾಡಿದವನು. ಆ ಮಹಾತಾಯಿ ಈ ಸಂಕಷ್ಟದ ಪರಿಸ್ಥಿತಿಯಲ್ಲಿ ಅವನನ್ನು ನಡುವಿನಲ್ಲಿ ಕೈಬಿಟ್ಟಾಳೆಯೆ? ಈ ವಿಶ್ವಾಸದಿಂದ, ತನ್ನ ಹತಾಶ ಭಾವನೆಯನ್ನು ಈ ಭಕ್ತಾಗ್ರೇಸರನು ಹೃದಯ ಕರಗುವ ಹಾಡುಗಳ ಮೂಲಕ ಪ್ರಕಟಗೊಳಿಸಿದನು. ಅಂಥ ಒಂದು ಹಾಡಿನ ಸಾರಾಂಶ ಹೀಗಿದೆ: ''ಅಮ್ಮಾ, ನಿನ್ನನ್ನೇ ನಂಬಿಕೊಂಡಿರುವ ಭಕ್ತನ ಪರಿಸ್ಥಿತಿ ಅದೆಂತಹ ವಿಚಿತ್ರವಾಗಿದೆಯಮ್ಮಾ! ಕೌಪೀನಕ್ಕಾದರೂ ಒಂದು ತುಂಡು ಬಟ್ಟೆ ಅವನಲ್ಲಿ ಇಲ್ಲವಲ್ಲವಮ್ಮಾ! ನಿನ್ನ ಭಕ್ತನ ದೇಹವಾದರೋ ಬೂದಿಮಯ! ತಲೆಯೋ ಧೂಳುಮಯ, ಕೂದಲೋ ಸುಕ್ಕು ಸುಕ್ಕು !''

ದಾರಿದ್ರ್ಯವೂ ಭಗವತಿಯ ಪ್ರಸಾದವೇ ಸರಿ. ಬಡತನ ಮತ್ತು ಕಷ್ಟಕಾರ್ಪಣ್ಯಗಳು ಕೂಡ ಜಗನ್ಮಾತೆಯ ಅನುಗ್ರಹವೇ ಎಂದು ತಿಳಿಯದವರೆಗೆ ದೇವಿಯ ಮೇಲೆ ನಿಜವಾದ ಭಕ್ತಿಯು ಮೂಡದು. ರಾಮಪ್ರಸಾದನು ಜಗನ್ಮಾತೆಯನ್ನು ಎಷ್ಟು ಬೇಡಿಕೊಂಡರೂ ಅವನ ದಾರಿದ್ರ್ಯ ತೀರಲಿಲ್ಲ. ಕಡೆಗೆ ಬೇರೆ ಗತಿಯಿಲ್ಲದೆ, ಕೆಲಸ ಹುಡುಕಿಕೊಂಡು ಕೊಲ್ಕತಾ ಮಹಾನಗರವನ್ನು ಹೊಕ್ಕನು. ಸಾಧಕ-ತಾಂತ್ರಿಕ-ವಿದ್ವಾಂಸನಾದ ರಾಮಪ್ರಸಾದನು ಬಹಳ ಕಷ್ಟಪಟ್ಟು ಕಡೆಗೂ ದುರ್ಗಾಚರಣ ಮಿತ್ರನೆನ್ನುವನ ಮನೆಯಲ್ಲಿ ಗುಮಾಸ್ತನಾಗಿ ಸೇರಿಕೊಂಡನು. ಅದೂ ತಿಂಗಳಿಗೆ ಕೇವಲ ಮೂವತ್ತು ರೂಪಾಯಿಗಳಿಗೆ! ಆದರೆ ರಾಮಪ್ರಸಾದನ ಕೃತಜ್ಞತಾಭಾವಕ್ಕೆ ಎಲ್ಲೆಯೇ ಇರಲಿಲ್ಲ. ತಾಯಿಗೆ ಹೃದಯಪೂರ್ವಕವಾಗಿ ಧನ್ಯವಾದಗಳನ್ನು ತನ್ನ ಹಾಡುಗಳ ಮೂಲಕ ಸಮರ್ಪಿಸಿದನು. ಗುಮಾಸ್ತನ ಜಾಗದಲ್ಲಿ ಕುಳಿತ ಅವನ ಮುಂದೆ ಲೆಕ್ಕಪತ್ರದ ಪುಸ್ತಕ ಇತ್ತು. ಅದರಲ್ಲಿ ಖರ್ಚುವೆಚ್ಚಗಳ ವಿವರವನ್ನು ಬರೆಯುವ ಬದಲು, ಜಗನ್ಮಾತೆಯ ಬಗ್ಗೆ ತನ್ನ ಹೃದಯದ ಆವೇಗವನ್ನು ತೋಡಿಕೊಂಡನು. ಅದನ್ನು ಹಾಡುಗಳ ಮೂಲಕ ಭಟ್ಟಿಯಿಳಿಸಿ, ಲೆಕ್ಕಪತ್ರದ ಪುಸ್ತಕದಲ್ಲಿ ಬರೆಯಲಾರಂಭಿಸಿದನು. ಬರೆದೂ ಬರೆದೂ ಬರೆದನು; ದಿನವೆಲ್ಲ ಬರೆದನು. ಖರ್ಚುವೆಚ್ಚದ ಪುಸ್ತಕದ ಪುಟಗಳು ಭಕ್ತಿಗೀತೆಗಳಿಂದ ತುಂಬಿಹೋದವು. ಮೇಲ್ವಿಚಾರಕನು ಇದನ್ನು ನೋಡಿ ಸುಮ್ಮನೆ ಇದ್ದಾನೆಯೆ? ಧಣಿಗೆ ದೂರುಕೊಟ್ಟನು. ರಾಮಪ್ರಸಾದನನ್ನು ಧಣಿಯು ಕರೆಸಿದನು; ಖರ್ಚುವೆಚ್ಚ ಪುಸ್ತಕವನ್ನೂ ತರಿಸಿದನು; ಓದುತ್ತ ಹೋದನು. ಓದುತ್ತ ಹೋದಂತೆ ಕಣ್ಣೀರು ಸುರಿಸಿದನು. ಆ ಹಾಡುಗಳಲ್ಲಿನ ಒಂದು ಪಂಕ್ತಿ ಅವನ ಹೃದಯವನ್ನು ಕರಗಿಸಿತು: ''ಅಮ್ಮಾ, ನಾನೊಬ್ಬ ನಿನ್ನ ವರಮಾನವಿಲ್ಲದ ಸೇವಕನಮ್ಮಾ, ನಿನ್ನ ಪಾದದ ಧೂಳನ್ನು ಮಾತ್ರ ಕೇಳಲು ನನಗೆ ಅಧಿಕಾರವಿದೆಯಮ್ಮಾ.'' ಕಟ್ಟಕಡೆಗೆ ಅತ್ಯಂತ ಗೌರವದಿಂದ ಮತ್ತು ವಾತ್ಸಲ್ಯದಿಂದ ಹೀಗೆ ಹೇಳಿದನು: ''ರಾಮಪ್ರಸಾದ, ನೀನು ಸಾಧಾರಣ ಬಾಳನ್ನು ಬಾಳಲು ಈ ಜಗತ್ತಿಗೆ ಬಂದವನಲ್ಲ. ನಿನ್ನ ಹಾಡುಗಳಲ್ಲಿ ನೀನು ಜಗನ್ಮಾತೆಯ ಸಂಪತ್ತು ತುಂಬಿದ ಹಡಗು ಬೇಕೆಂದು ಅವಳನ್ನು ಬೇಡಿಕೊಂಡಿದ್ದೀಯೆ. ಇನ್ನು ಮುಂದೆ ನೀನು ಪೂರ್ಣಕಾಲ ಅದನ್ನು ಪಡೆದುಕೊಳ್ಳುತ್ತೀಯೆ. ಅಪ್ಪಾ ರಾಮಪ್ರಸಾದ, ನನ್ನ ಲೆಕ್ಕದ ಪುಸ್ತಕವನ್ನು ಹಾಳುಮಾಡಿದೆಯೆಂದು ನನಗೆ ಸ್ವಲ್ಪವೂ ಬೇಸರವಿಲ್ಲ. ಇದಕ್ಕೆ ಬದಲಾಗಿ ನಿನ್ನ ಭಕ್ತಿಯುತ ಬರಹಗಳಿಂದ ನನ್ನ ಈ ಲೆಕ್ಕದ ಪುಸ್ತಕ ಪುನೀತವಾಗಿಹೋಯಿತು. ನಿನ್ನ ಭಕ್ತಿಯ ಲೆಕ್ಕ ಇದರಿಂದ ಭಗವತಿಗೆ ತಿಳಿದುಹೋಯಿತು. ನೀನು ಇನ್ನು ಮನೆಗೆ ಹೋಗಬಹುದು. ನಿನಗೆ ಪ್ರತಿತಿಂಗಳೂ ಮೂವತ್ತು ರೂಪಾಯಿಗಳ ಮಾಸಾಶನ ದೊರಕುವಂತೆ ನಾನು ವ್ಯವಸ್ಥೆ ಮಾಡುತ್ತೇನೆ.''

ಇದನ್ನು ಕೇಳಿ ರಾಮಪ್ರಸಾದನಿಗೆ ಬಹಳ ಸಂತೋಷವಾಯಿತು. ಅವನ ಹೃದಯದಿಂದ ಕೃತಜ್ಞತೆಯ ಹಾಡು ಹುಟ್ಟಿತು : ''ಓ ಮನಸ್ಸೇ, ನೀನೊಬ್ಬ ಕಿಡಿಗೇಡಿಯೇ ಸರಿ! ನೀನು ಭಿಕ್ಷುಕನಲ್ಲ ಎಂದು ನಿನಗೆ ಗೊತ್ತೇ ಇಲ್ಲ. ಕ್ಷಣಿಕ ಆಸೆಗಳನ್ನು ಬಯಸಿ ಊರಿಂದೂರಿಗೆ ಸುತ್ತುತ್ತೀಯೆ. ಅದಕ್ಕೆ ಬದಲಾಗಿ, ಎಲ್ಲಿಗೂ ಹೋಗದೆ, ನಿನ್ನ ಸ್ವಂತ ಮನೆಯಲ್ಲಿಯೇ ಬಿದ್ದಿರುವ ಎಣಿಸಲಾಗದ ಸಂಪತ್ತನ್ನು ನೀನು ಅನುಭವಿಸಬಹುದಾಗಿತ್ತು. ಓ ಮನಸ್ಸೇ, ನೀನು ಪ್ರಾಮಾಣಿಕನಾಗಿದ್ದರೆ, ಯೋಗದಲ್ಲಿ ನಿನಗೆ ಪೂರ್ಣ ಏಕಾಗ್ರತೆ ನೆಲೆಸಿದ್ದರೆ, ಯಾವ ವಿಷವೂ ನಿನ್ನನ್ನು ಕೊಲ್ಲಲಾಗದು.'' ಇದನ್ನು ಕೇಳಿ ಧಣಿಗೆ ಬಹಳ ಸಂತೋಷವಾಯಿತು. ಭಗವತಿಯ ನಾಮವನ್ನು ನಿರಂತರವಾಗಿ ಜಪಿಸುತ್ತ ರಾಮಪ್ರಸಾದನು ತನ್ನ ಸ್ವಂತ ಗ್ರಾಮಕ್ಕೆ ವಾಪಸ್ಸು ಹೋದನು.

ತನ್ನ ಸ್ವಂತ ಹಳ್ಳಿಗೆ ವಾಪಸ್ಸು ಹೋದ ರಾಮಪ್ರಸಾದ ಯಾವ ಪ್ರಾಪಂಚಿಕ ಚಿಂತನೆಗಳೂ ಇಲ್ಲದೆ ತಾಂತ್ರಿಕ ಸಾಧನೆಯಲ್ಲಿ ನಿರತನಾದನು. ಭಗವತಿಯ ಧ್ಯಾನ ಮಾಡುತ್ತ, ಅವಳ ಕುರಿತಾದ ಹಾಡುಗಳನ್ನು ರಚಿಸುತ್ತ, ಹಾಡುತ್ತ ಹೋದನು. ಅವನ ಮನಸ್ಸಿನ ಅಲೆಗಳು ಕಾಲೀಪದಧ್ಯಾನದಲ್ಲಿ ಅತ್ತಿತ್ತ ಹೊಯ್ದಾಡತೊಡಗಿದವು.

ಅವನದೊಂದು ವಿಚಿತ್ರ ಅಭ್ಯಾಸವಿತ್ತು. ಪ್ರತಿದಿನವೂ ಅವನು ಕತ್ತಿನ ಮಟ್ಟದವರೆಗೆ ಗಂಗೆಯ ನೀರಿನಲ್ಲಿ ಮುಳುಗುವನು. ಗಟ್ಟಿಯಾಗಿ ದೇವಿಯ ಬಗೆಗಿನ ಹಾಡುಗಳನ್ನು ಒಂದಾದ ಮೇಲೊಂದಾಗಿ ಹಾಡುವನು. ಅವನದು ಶಕ್ತಿಯುತ ಕಂಠ. ಗಂಗೆಯ ಗರ್ಭದಲ್ಲಿ ರಾಮಪ್ರಸಾದನ ಹೃದಯಗಂಗೆಯಿಂದ ನಾದಗಂಗೆಯ ಲಹರಿಯು ನಿರಂತರವಾಗಿ ಹೊರಹೊಮ್ಮುವುದು. ಅದು ಗಂಗಾನದಿಯ ಕಲರವದೊಂದಿಗೆ ಸೇರಿಕೊಂಡು ಭಾವಗಂಗೆಯಾಗುವುದು. ಗಂಗಾನದಿಯಲ್ಲಿ ದೋಣಿಯಲ್ಲಿ ಹೋಗುತ್ತಿದ್ದ ಪ್ರಯಾಣಿಕರು ಆಶ್ಚರ್ಯದಿಂದ ಇವನನ್ನೇ ನೋಡುತ್ತಿದ್ದರು. ಒಮ್ಮೆ ಈ ರೀತಿ ರಾಮಪ್ರಸಾದನು ತನ್ನ ಭಾವಸಾಮ್ರಾಜ್ಯದಲ್ಲಿ ಮುಳುಗಿಹೋಗಿದ್ದನು. ನವದ್ವೀಪದ ಮಹಾರಾಜ ಕೃಷ್ಣಚಂದ್ರನು ತನ್ನ ದೊಡ್ಡ ನೌಕೆಯಲ್ಲಿ ಪ್ರಯಾಣಮಾಡುತ್ತಿದ್ದವನು, ಅವನನ್ನು ನೋಡಿದನು. ನೌಕೆಯನ್ನು ನಿಲ್ಲಿಸಿ, ರಾಮಪ್ರಸಾದನ ಮುಖಕಮಲದಿಂದ ಹೊರ ಹೊಮ್ಮುತ್ತಿದ್ದ ಗಾನಾಮೃತವನ್ನು ಕೇಳುತ್ತ ಹೋದನು. ಗಂಟೆಗಳ ಕಾಲ ಕಳೆದುಹೋಯಿತು. ತದನಂತರ ಕೃಷ್ಣಚಂದ್ರನು

ರಾಮಪ್ರಸಾದನನ್ನು ತನ್ನ ಆಸ್ಥಾನವನ್ನು ಅಲಂಕರಿಸುವಂತೆ ಕೇಳಿಕೊಂಡನು. ರಾಮಪ್ರಸಾದನು ಸಿಡಿಲಿನಿಂದ ಬಡಿದವನಂತೆ ತಲ್ಲಣಿಸಿ ಹೋದನು. ಅವನು ಜಗನ್ಮಾತೆಯನ್ನು ತನ್ನ ಹೃದಯಮಂದಿರದ ಸಿಂಹಾಸನದಲ್ಲಿ ಪ್ರತಿಷ್ಠಾಪಿಸಿಕೊಂಡಿದ್ದಾನೆ. ಅವನಿಗೆ ಇನ್ನಾವ ರಾಜನಾದರೋ, ಏತಕ್ಕೆ ತಾನೇ ಬೇಕು? ಕಡೆಗೆ ನೂರು ಭಿಘಾಗಳಷ್ಟು ಫಲವತ್ತಾದ ಭೂಮಿಯನ್ನು ಕೊಡುಗೆಯಾಗಿ ತೆಗೆದುಕೊಳ್ಳುವಂತೆ ಕೃಷ್ಣಚಂದ್ರನು ಒತ್ತಾಯಿಸಿದನು. ರಾಮಪ್ರಸಾದನು ಅದಕ್ಕೆ ಮಣಿಯಲೇಬೇಕಾಯಿತು. ರಾಮಪ್ರಸಾದನು ತನ್ನ ಹೃದಯ ಮತ್ತು ಆತ್ಮಗಳನ್ನು ಭಗವತಿಗೆ ಸಮರ್ಪಿಸಿಬಿಟ್ಟಿದ್ದನು. ಅವಳು ಅವನನ್ನು ಚೆನ್ನಾಗಿ ನೋಡಿಕೊಳ್ಳಲಾರಳೆ? ಖಂಡಿತವಾಗಿ ಅವನ ಕುಟುಂಬದ ಪರಿಸ್ಥಿತಿಯನ್ನು ದೇವಿಯೇ ಉತ್ತಮಪಡಿಸಿದಳು.

ಇದೇ ರೀತಿ ಆ ಪ್ರದೇಶದ ನವಾಬ ಸಿರಾಜುದ್ದೌಲನೂ ರಾಮಪ್ರಸಾದನ ಹಾಡುಗಳನ್ನು ಕೇಳಿ ಆಕರ್ಷಿತನಾದನು. ಮುರ್ಷಿದಾಬಾದಿನ ತನ್ನ ಅರಮನೆಗೆ ಆಹ್ವಾನಿಸಿದನು. ರಾಮಪ್ರಸಾದನು ಒಡನೆಯೇ ನಿರಾಕರಿಸಿದನಾದರೂ, ಮುಂದೊಮ್ಮೆ ಅಲ್ಲಿಗೆ ಭೇಟಿ ಕೊಟ್ಟನು.

ಕುಟುಂಬದ ತಾಪತ್ರಯವೆಲ್ಲ ಕಳೆದ ನಂತರ ರಾಮಪ್ರಸಾದನು ಸಾಧನೆಯ ಸಾಗರದಲ್ಲಿ ಮುಳುಗಿ, ಸಾಕ್ಷಾತ್ಕಾರದ ರತ್ನಗಳನ್ನು ಹೆಕ್ಕಿಕೊಳ್ಳಲು ಆರಂಭಿಸಿದನು. ಈ ಭಾವವು ಅವನ ಈ ಹಾಡಿನಲ್ಲಿ ವ್ಯಕ್ತವಾಗುವುದು:

**ಜೈ ಕಾಳಿ ಎನ್ನುತ್ತ ಹೃದಯ ರತ್ನಾಕರನ**
**ಅಗಾಧ ಆಳಕ್ಕೆ ಮುಳುಗು ಮನವೇ ॥**

**ಮೊದಲೆರಡು ಸಲ ನೀನು ವಿಫಲನಾದರೆ ಒಳಗೆ**
**ಬರಿ ಶೂನ್ಯವೆಂದಿದನು ತೆಗಳಬೇಡ,**
**ದೃಢಮನದ ಸಂಯಮದಿ ಕುಲಕುಂಡಲಿನಿ ಕೂಲ**
**ದೊಳಗಿಳಿದು ಅನುಭವವ ಪಡೆದು ನೋಡ !**

**ಜ್ಞಾನಸಾಗರದೊಳಗೆ ಶಾಂತಿ ಮುಕ್ತಾಫಲದ**
**ಭಂಡಾರವಿದೆ ಹೋಗು, ಅದನು ಗಳಿಸು.**
**ಆಹಾರ ಲೋಭದಲಿ ಅಲೆವ ಅರಿವರ್ಗಗಳ**
**ವಿವೇಕ ಲೇಪನದಿ ದೂರಗೊಳಿಸು.**
**ರಾಮಪ್ರಸಾದನನು ಕೇಳು ಹೇಳುವನವನು ;**
**ಅಂತರಂಗದೊಳಿರುವ ಅನಂತ ರತ್ನವನು**
**ಮುಳುಗಿ ಮೇಲಕೆ ತಂದು ಅದನು ಧರಿಸು.**

ರಾಮಪ್ರಸಾದನು ತನ್ನ ಮನೆಯ ಹತ್ತಿರ ಪಂಚವಟಿಯನ್ನು (ಪವಿತ್ರವಾದ ಐದು ಮರಗಳು) ನೆಟ್ಟಿದ್ದನು. ಪಂಚಮುಂಡಿ ಆಸನವನ್ನು ರಚಿಸಿದ್ದನು. ಅದರ ಮೇಲೆ ಕುಳಿತು, ಉತ್ಕಟವಾದ ತಾಂತ್ರಿಕ ಸಾಧನೆಯಲ್ಲಿ ಮುಳುಗಿದನು. ಊಟಕ್ಕೆಂದು ಎರಡು ಸಲ ಮನೆಗೆ ಹೋಗುತ್ತಿದ್ದನು. ಏಕಾದಶಿ, ಹುಣ್ಣಿಮೆ ಮತ್ತು ಅಮಾವಾಸ್ಯೆ – ಈ ಪವಿತ್ರದಿನಗಳಂದು ಆಹಾರಕ್ಕೂ ಮನೆಗೆ ಹೋಗುತ್ತಿರಲಿಲ್ಲ. ಜಗನ್ಮಾತೆಯ ಪೂಜೆ ಮತ್ತು ಧ್ಯಾನದಲ್ಲಿ ಮುಳುಗಿಹೋಗಿರುತ್ತಿದ್ದನು. ಒಮ್ಮೊಮ್ಮೆ ತಾಯಿಯ ವಿರಹದ ವೇದನೆಯಿಂದ ಆಕ್ರಾಂತವಾದ ಹಾಡು ಹೊಮ್ಮುವುದು; ಇನ್ನೊಮ್ಮೆ ತಾಯಿಯ ಸಾನ್ನಿಧ್ಯದ ಅಪಾರ ಹರ್ಷದಿಂದ ತುಂಬಿಹೋದ ಹಾಡು ಮೂಡುವುದು. ಹೀಗೆ ಅವನ ಮನಸ್ಸು ದಿವ್ಯೋನ್ಮಾದದಲ್ಲಿ ತೇಲಾಡುತ್ತಿತ್ತು; ಇಲ್ಲ, ಮುಳುಗಿ ಹೋಗುತ್ತಿತ್ತು.

ದಿವ್ಯಮಾತೆಯು ಅವನೊಡನೆ ದಿವ್ಯಲೀಲೆಗಳನ್ನು ಆಡುತ್ತಿದ್ದಳು. ಆಗಾಗ್ಗೆ ಅವನಿಗೆ ಬೇರೆ ಬೇರೆ ರೂಪಗಳಲ್ಲಿ ದರ್ಶನ ಕೊಡುತ್ತಿದ್ದಳು. ಪ್ರಥಮ ಬಾರಿಗೆ ಮನೆಯ ಹತ್ತಿರ ಇರುವ ತೋಟದಲ್ಲಿ ಕಾಣಿಸಿಕೊಂಡಳು. ಇದರಿಂದಾಗಿ ರಾಮಪ್ರಸಾದನಲ್ಲಿ ಬಹಳ ಮಾರ್ಪಾಡುಗಳು ಉಂಟಾದವು. ಶರೀರದ ಲಕ್ಷಣಗಳಲ್ಲೂ ಪರಿವರ್ತನೆಯಾಯಿತು. ಆ ಸಮಯದಲ್ಲಿ ದಿವ್ಯವಾದ ಬೆಳಕೊಂದು ಅವನ ಮುಖದಿಂದ ಹೊರಸೂಸುತ್ತಿತ್ತು. ಈ ದರ್ಶನದಿಂದ ಅವನ ಜೀವನದಲ್ಲಿ ಅದ್ಭುತವಾದ ಘಟನೆಗಳು ಜರುಗಲು ಆರಂಭಿಸಿದವು. ಒಮ್ಮೆ ಬೇಲಿಯನ್ನು ಅವನೇ ರಿಪೇರಿ ಮಾಡುತ್ತಿದ್ದನು. ಅವನ ಮಗಳು ಜಗದೇಶ್ವರಿ ಕಟ್ಟುವ ಹಗ್ಗವನ್ನು ಎಳೆದುಕೊಡುತ್ತಿದ್ದಳು. ರಾಮಪ್ರಸಾದನು ಕಟ್ಟುವ ಕೆಲಸವನ್ನು ಮಾಡುತ್ತಿದ್ದನು. ಅಷ್ಟರಲ್ಲಿ ಬೇರೆ ಯಾವುದೇ ಕೆಲಸಕ್ಕೆ ತಾಯಿ ಮಗಳನ್ನು ಕರೆದಳು. ಮಗಳು ಅಪ್ಪನಿಗೆ ಏನೂ ಹೇಳದೆ ಹೋಗಿಬಿಟ್ಟಳು. ಅಷ್ಟಾದರೂ ರಾಮಪ್ರಸಾದನ ಹತ್ತಿರ ಹಗ್ಗ ಬರುತ್ತಲೇ ಇತ್ತು, ಅವನು ಬೇಲಿ ಕಟ್ಟುತ್ತಲೇ ಇದ್ದನು. ಅವನ ದೃಷ್ಟಿಯಲ್ಲಿ ಮಗಳು ಹಗ್ಗ ಬಿಡಿಸಿಕೊಡುತ್ತಳೇ ಇದ್ದಾಳೆ. ಸ್ವಲ್ಪ ಸಮಯದ ಬಳಿಕ ಮಗಳು ವಾಪಸ್ಸು ಬಂದಳು. ಅಪ್ಪ ಹಗ್ಗದಿಂದ ಬೇಲಿ ಕಟ್ಟುತ್ತಿರುವುದನ್ನು ಕಂಡು ಅವಾಕ್ಕಾದಳು. ಆಗಲೇ ರಾಮಪ್ರಸಾದನಿಗೆ ಗೊತ್ತಾಗಿದ್ದು, ಮಗಳು ಮನೆ ಕಡೆ ಹೋಗಿದ್ದಳು ಎಂದು. ಸ್ವಲ್ಪಕಾಲದ ನಂತರ ಅವನಿಗೆ ಗೊತ್ತಾಯಿತು, ಭಗವತಿಯೇ ತನ್ನ ಮಗಳ ರೂಪದಲ್ಲಿ ಬಂದಿದ್ದಳು ಎಂದು. ಅವನ ಮನಸ್ಸು ಕೃತಜ್ಞತೆಯಿಂದ ತುಂಬಿಹೋಯಿತು. ಅವನು ಹಾಡಿದನು:

''ಓ ಮನಸ್ಸೇ, ಅದೇಕೆ ತಾಯಿಯ ಪಾದಗಳಿಂದ ದೂರ ಹೋಗುತ್ತಿರುವೆ? ಓ ಮನವೇ, ತಾಯಿಯನ್ನು ಧ್ಯಾನಿಸು, ಮುಕ್ತಿಯನ್ನು ಪಡೆಯುವೆ. ತಾಯಿಯ ಪಾದಗಳನ್ನು ಭಕ್ತಿಯೆಂಬ ದಾರದಿಂದ ಕಟ್ಟಿಹಾಕು. ಅಯ್ಯಾ, ಎಂಥ ದುರದೃಷ್ಟವಯ್ಯಾ, ನಿನ್ನದು. ಜಗನ್ಮಾತೆಯೇ ನಿನ್ನ ಮಗಳಾಗಿ ಬಂದರೂ, ಕಣ್ಣಿದ್ದರೂ ನೋಡಲಾಗಲಿಲ್ಲವಯ್ಯಾ ನಿನಗೆ? ಅವಳೇ ಬಂದು ನಿನ್ನ ಬೇಲಿ ರಿಪೇರಿ ಮಾಡಿದರೂ ನಿನಗೆ ಗೊತ್ತಾಗಲಿಲ್ಲವಲ್ಲಾ!''

ಇನ್ನೊಂದು ಸಂದರ್ಭ. ರಾಮಪ್ರಸಾದನು ಸ್ನಾನಕ್ಕಾಗಿ ನದಿಯ ಕಡೆಗೆ ಹೊರಟಿದ್ದನು. ದಾರಿ ಮಧ್ಯೆ ಅತ್ಯಂತ ಸುಂದರ ಯುವತಿಯೊಬ್ಬಳು ನಿಂತಿದ್ದಳು. ''ನಿನ್ನ ಹಾಡು ಕೇಳಬೇಕು'' ಎಂದಳು. ಸ್ವಲ್ಪ ಹೊತ್ತು ಕಾಯುವಂತೆ ಹೇಳಿ ರಾಮಪ್ರಸಾದನು ನದಿಯ ಕಡೆಗೆ ಹೊರಟನು. ಸ್ನಾನ ಮುಗಿಸಿ ತಿರುಗಿಬಂದಾಗ ಆ ಯುವತಿ ಮಂಗಮಾಯವಾಗಿದ್ದಳು. ಅವಳು ನಿಂತಿದ್ದ ದೇವಸ್ಥಾನದ ಗೋಡೆಯ ಬದಿಯಲ್ಲಿ ಏನೋ ಬರೆದಿತ್ತು. ಅದನ್ನು ಓದಿದ ರಾಮಪ್ರಸಾದನಿಗೆ ರೋಮಾಂಚನವಾಯಿತು: ''ನಾನು ಅನ್ನಪೂರ್ಣೆ. ನಿನ್ನ ಹಾಡು